ಬಿರುಸು ಮಳೆಯ ಸಾಧ್ಯತೆ ನೂರು ಪರ್ಸೆಂಟ್ ಇಲ್ಲವೆಂದು ಹವಾಮಾನ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಕೆ.ಎಮ್. ನಯ್ಯಾರರಿಗೆ ಫೋನ್ ಮೂಲಕ ತಿಳಿಸಿದ್ದರಿಂದ ಒಂದು ರೀತಿಯ ಪ್ರಸನ್ನತೆ ಮುಖದಲ್ಲಿ ಮೂಡಿ, ಡ್ರಿಂಕ್ಸ್ ಗ್ಲಾಸನ್ನು ಕೈಗೆತ್ತಿಕೊಂಡು ಚಿಯರ್ಸ್ ಹೇಳಿ ಬಾಯಿಗಿಟ್ಟುಕೊಂಡಿದ್ದರು. ನಾನೂ ಸಹ ಡ್ರಿಂಕ್ಸ್ ಗುಟುಕರಿಸಿದ್ದೆ. ಹುರಿದ ಗೋಡಂಬಿಯನ್ನು ಬಾಯಿಗಿಟ್ಟುಕೊಂಡ ಕೆ.ಎಮ್. ನಯ್ಯಾರ್, 'ಅಂ, ನಿಮಗೆ ಎಲ್‌ಎಸ್ಡಿ ಬಗ್ಗೆ ತಿಳಿದೇ ಇರುತ್ತದೆ. ಅದನ್ನು ಡ್ರಗ್ ಎಂದೇ ಸಾಮಾನ್ಯ ಜನರೇ ಏನು ಆಡಳಿತಗಾರರೂ ತಿಳಿದುಕೊಂಡಿದ್ದಾರೆ. ಆದರೆ ನನ್ನ ಅನುಭವಕ್ಕೆ ಬಂದಂತೆ ಅದೊಂದು ದಿವ್ಯವಾದ ಅನುಭೂತಿ. ತನುಮನಗಳನ್ನು ಶುದ್ಧೀಕರಿಸುವ ನಿರಂತರ ಪ್ರಯೋಗ. ಸುಮಾರು ಎಂಬತ್ತನಾಲ್ಕು ವರ್ಷಗಳ ಹಿಂದೆ ಸ್ವಿಸ್ ವಿಜ್ಞಾನಿ ಆಲ್ಬರ್ಟ್ ಹಾಫ್‌ಮ್ಯಾನ್ ಎಂಬುವವನು ಎಲ್‌ಎಸ್ಡಿ ಕಂಡು ಹಿಡಿದಿದ್ದು. ಅದು ಮೈಗ್ರೇನ್ ಎಂದು ಕರೆಸಿಕೊಳ್ಳುವ ತಲೆನೋವಿಗೆ ಅತ್ಯುತ್ತಮ ಔಷಧಿಯಾಗಿ ಹೊರಹೊಮ್ಮಿತು. ತನ್ನ ಮೇಲೆ ಪ್ರಯೋಗ ಮಾಡಿಕೊಂಡಿದ್ದೇ ಅಲ್ಲದೆ ತನ್ನ ಅನೇಕ ಸಹೋದ್ಯೋಗಿಗಳ ಮೇಲೆ ಕೂಡ ಎಲ್‌ಎಸ್ಡಿಯನ್ನು ಹಾಫ್‌ಮ್ಯಾನ್ ಪ್ರಯೋಗ ಮಾಡಿ ಅದ್ಭುತವಾದ ಫಲಿತಾಂಶ ಪಡೆಯುತ್ತಾನೆ. ನಿಯಮಿತವಾಗಿ ಎಲ್‌ಎಸ್ಡಿಯನ್ನು ತೆಗೆದುಕೊಂಡರೆ ಯಾವ ದುಃಖವೂ ವ್ಯಕ್ತಿಯನ್ನು ಆಕ್ರಮಿಸಿಕೊಳ್ಳಲಾರದು. ಯಾವ ಮತ್ತು ಎಂಥ ನಷ್ಟವೂ ವ್ಯಕ್ತಿಯನ್ನು ಬಾಧಿಸಲಾರದು.

ಒಂದೆರಡು ಸಾರಿ ಎಲ್‌ಎಸ್ಡಿಯನ್ನು ಸೇವಿಸಿದರೂ ಧೈರ್ಯದಿಂದ ಜೀವನದಲ್ಲಿ ಮುಂದೆ ಸಾಗುವ ಅದಮ್ಯ ಚೇತನ ಹುಟ್ಟಿಕೊಳ್ಳುತ್ತದೆ. ಪ್ರಪಂಚದಾದ್ಯಂತ ಕಾಲೇಜು ವಿದ್ಯಾರ್ಥಿಗಳು ಎಲ್‌ಎಸ್ಡಿಯನ್ನು ಉಪಯೋಗಿಸುತ್ತಾರೆ. ಆದರೆ ಎಲ್‌ಎಸ್ಡಿ ಕನ್ಸಂಪ್ಷನ್ ಅತಿಯಾದರೆ ಮಾತ್ರ ಆರೋಗ್ಯದ ಮೇಲೆ ವಿಪರೀತ ಕೆಟ್ಟ ಪರಿಣಾಮ ಉಂಟಾಗುತ್ತದೆ. ಎಷ್ಟು ಗಂಟೆಗಳ ಕಾಲ ನಾವು ಎಲ್‌ಎಸ್ಡಿಯ ವಶದಲ್ಲಿರಬೇಕೆಂದು ನಿರ್ಧರಿಸಿ ಅದಕ್ಕೆ ತಕ್ಕಂತೆ ಎಲ್‌ಎಸ್ಡಿ ಪ್ರಮಾಣವನ್ನು ಸೇವಿಸಬೇಕು. ಎಲ್‌ಎಸ್ಡಿ ಎಷ್ಟು ಗಂಟೆಗಳ ಕಾಲ ಅದರ ಪರಿಣಾಮವನ್ನು ಇರಿಸುತ್ತದೋ ಆ ಅವಧಿಗೆ ಟ್ರಿಪ್ ಎಂದು ಕರೆಯುತ್ತೇವೆ. ನಮ್ಮ ಚಾಲೆಂಜ್ ದಿ ಚಾಲೆಂಜ್ ಆಶ್ರಮದಲ್ಲೂ ಅತ್ಯಂತ ನೋವನ್ನು ಅನುಭವಿಸುವ ಮೆಂಟಲಿ ಮತ್ತು ಫಿಸಿಕಲಿ ಚಾಲೆಂಜ್ಡ್ ಮಕ್ಕಳಿಗೆ ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಲೈಟಾಗಿ ನೀಡುತ್ತೇವೆ. ಆ ಸಮಯದಲ್ಲಿ ಅವರ ಸಂತೋಷ ಮತ್ತು ಸಂತೃಪ್ತಿಗಳನ್ನು ನೋಡಬೇಕು. ಮನುಷ್ಯನ ನೋವನ್ನು ಯಾವುದು ಮರೆಸುತ್ತದೋ ಅದೇ ನಿಜವಾದ ಅಮೃತ. ಸಮಾಜದಲ್ಲಿ ಸಾಮಾನ್ಯ ಜನರಿಗೆ ಇದು ಗೊತ್ತಾಗುವುದಿಲ್ಲ. ಗೊತ್ತಾದರೂ ಲಭ್ಯವಾಗುವುದಿಲ್ಲ. ಜಗತ್ತಿನಾದ್ಯಂತ ಸರ್ಕಾರಗಳು ಅದನ್ನು ಬ್ಯಾನ್ ಮಾಡಿವೆ. ಮದ್ಯ, ತಂಬಾಕು, ಅನೇಕ ವಿಷಕಾರಿ ಪಾನೀಯಗಳನ್ನು, ಆಹಾರ ಪದಾರ್ಥಗಳನ್ನು ಜಾಗತಿಕ ಮಾರುಕಟ್ಟೆಯಲ್ಲಿ ಎಗ್ಗಿಲ್ಲದೆ ಜನರ ದೇಹಗಳಿಗೆ ತುಂಬುವ ಈ ರಾಜಕೀಯ ಮತ್ತು ಆಡಳಿತ ಕೇಂದ್ರಗಳಿಗೆ ನಾಚಿಕೆಯಾಗಬೇಕು. ಜಗತ್ತಿನ ಎಲ್ಲಾ ಶಕ್ತಿ ಕೇಂದ್ರಗಳ ಪರಿಧಿಯಲ್ಲಿರುವ ವ್ಯಕ್ತಿಗಳು ಇಂಥ ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತಾರೆ. ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ' ಎಂದು ವಿಸ್ಕಿಯನ್ನು ಕುಡಿಯುತ್ತಾ, ಗೋಡಂಬಿಯನ್ನು ತಿನ್ನುತ್ತಾ ಮತ್ತಿನಲ್ಲಿ ಮಾತನಾಡುತ್ತಿದ್ದರು ಕೆ.ಎಮ್.ನಯ್ಯಾರ್. ಅವರ ಮಾತುಗಳಲ್ಲಿ ಸ್ಪಷ್ಟತೆಯಿರುವುದು ಅರಿವಾಗಿತ್ತು ನನಗೆ.

ಅಷ್ಟರಲ್ಲಿ ಮನೋಹರ್ ಕುಂಜು ಮೊಬೈಲ್ ಫೋನನ್ನು ಹಿಡಿದು ಬಂದವನು, 'ಪಿಡಬ್ಲ್ಯುಡಿ ಮಿನಿಸ್ಟರ್ ಸತೀಶನ್ ಹರಿಹರನ್ ಲೈನಿನಲ್ಲಿದ್ದಾರೆ' ಎಂದು ಫೋನ್ ಕೈಗೆ ಕೊಟ್ಟಿದ್ದ. ಹತ್ತು ನಿಮಿಷದಲ್ಲಿ ಊಟ ರೆಡಿ ಮಾಡಲು ಕುಂಜುಗೆ ಹೇಳಿದ ಕೆ.ಎಮ್. ನಯ್ಯಾರ್ ಫೋನಿನ ಲೌಡ್ ಸ್ಪೀಕರ್ ಆನ್ ಮಾಡಿ 'ಹಲೋ ಹರಿ..' ಎಂದಿದ್ದರು. 'ಅಣ್ಣಾ, ಟೀವಿ ಚಾನಲ್‌ಗಳಲ್ಲಿ ನೀವು ಪ್ರವಾಹ ಪರಿಹಾರ ಕಾರ್ಯಗಳಲ್ಲಿ ತೊಡಗಿರುವುದನ್ನು ನೋಡಿ ನನಗೆ ಕರುಳು ತುಂಬಿ ಬಂತು. ಏನೋ ಅರ್ಜೆಂಟ್ ಕೆಲಸ ಬಿದ್ದು ಮೊನ್ನೆ ದಿಲ್ಲಿಗೆ ಬಂದೆ. ಇವೊತ್ತು ಬೆಳಿಗ್ಗೆ ವಾಪಸ್ಸು ಬರುವುದಿತ್ತು. ಆದರೆ ಶಬರಿಮಲೆ ಸ್ವಾಮಿ ನಮ್ಮ ಜಿಲ್ಲೆಯ ಮೇಲೆ ಯಾಕೆ ಇಷ್ಟೊಂದು ಮುನಿಸಿಕೊಂಡಿದ್ದಾನೋ ಕಾಣೆ. ಶಬರಿಮಲೆ ದೇವಳಂ ಒಳಕ್ಕೆ ಹೆಂಗಸರು ಪ್ರವೇಶ ಮಾಡಬೇಕೆಂಬ ಹೋರಾಟಕ್ಕೆ ಫಾರೆಸ್ಟ್ ಮಿನಿಸ್ಟರ್ ಅಖಿಲನ್ ಕುರ್ಯೈ ತೆರೆಮರೆಯಲ್ಲಿ ಸಿಕ್ಕಾಪಟ್ಟೆ ಕುಮ್ಮಕ್ಕು ಕೊಟ್ಟಿದ್ದಾನೆ. ಪಾರ್ಟಿಯ ಹೈಯರ್ ಇನ್ನರ್ ಸರ್ಕಲ್‌ನಲ್ಲಿ ತುಂಬಾನೆ ಚರ್ಚೆಯಾಗ್ತಿದೆ. ಚಿಲವನ್ನೂರ್ ನದಿಯ ದಡದಲ್ಲಿರುವ ನಿಮ್ಮ ಅಪಾರ್ಟ್‌ಮೆಂಟ್‌ಗಳನ್ನು ನೆಲಸಮ ಮಾಡಲು ಹೋರಾಟ ನಡೆಸುತ್ತಿರುವ ನೆಲ್ಸನ್‌ಗೆ ಮೊದಲಿನಿಂದಲೂ ಸಪೋರ್ಟ್ ಮಾಡಿದ್ದೇ ಅಖಿಲನ್ ಕುರ್ಯೈ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನ ಹೈಯರ್ ಆಫೀಸರ್‌ಗಳಿಗೆ ಹೇಳಿ ನೆಲ್ಸನ್‌ಗೆ ಬೇಕಾಗಿರುವ ಎಲ್ಲಾ ಡಾಕ್ಯುಮೆಂಟ್ಸನ್ನೂ ಕೊಡಿಸಿರುವವನಲ್ಲದೆ ಒಂದು ದೊಡ್ಡ ಮೊತ್ತದ ಅಮೌಂಟನ್ನೂ ಅವನಿಗೆ ತಲುಪಿಸಿದ್ದಾನಂತೆ. ಅಖಿಲನ್ ಕುರ್ಯೈನ ಕುಮ್ಮಕ್ಕು ಇಲ್ಲದಿದ್ದರೆ ಸುಪ್ರೀಂ ಕೋರ್ಟ್‌ಗೆ ಹೋಗುವ ಧೈರ್ಯವನ್ನು ನೆಲ್ಸನ್ ಖಂಡಿತಾ ತೋರಿಸುತ್ತಿರಲಿಲ್ಲ.

ಒಂದು ಕಾಲದಲ್ಲಿ ಅಖಿಲನ್ ರಾಜಕೀಯದಲ್ಲಿ ಒದ್ದಾಡುತ್ತಿದ್ದರೆ ಏಣಿಯಂತೆ ಆಸರೆ ಕೊಟ್ಟು ಮೇಲಕ್ಕೆತ್ತಿದ್ದಿರಿ. ನನಗೆ ಗೊತ್ತು, ನೀವು ಯಾವಾಗಲೂ ಕಿಂಗ್ ಮೇಕರ್ ಆಗಿ ಮೆರೆದವರು ಅಂತ. ಕಿಂಗ್ ಮೇಕರ್ ಈಸ್ ಆಲ್ವೇಸ್ ಗ್ರೇಟರ್ ದೇನ್ ದಿ ಕಿಂಗ್. ನ್ಯಾಯಾನ್ಯಾಯಗಳನ್ನು ಶಬರಿಮಲೆ ಅಪ್ಪನೇ ನೋಡಿಕೊಳ್ತಾನೆ ಬಿಡಿ ಅಣ್ಣಾ' ಎಂದು ಸತೀಶನ್ ಹರಿಹರನ್ ಮಾತು ನಿಲ್ಲಿಸಿ ನೀರು ಕುಡಿಯುತ್ತಿರುವುದು ಆ ಕಡೆಯ ಸದ್ದಿನಿಂದಲೇ ಗೊತ್ತಾಗಿತ್ತು. 'ಹರಿಹರನ್, ನೀವು ಹೇಳಿದ ಪ್ರತಿಯೊಂದು ಸಂಗತಿಯೂ ನನಗೆ ತಿಳಿದಿದೆ. ನೀವು ನನ್ನನ್ನು ಮೊದಲಿನಂತೆ ಪವರ್ ಬ್ರೋಕರ್ ಅಂತ ತಿಳಿದಂತಿದೆ. ಕಿಂಗ್ ಮೇಕರ್ ಎಂಬ ಶಬ್ದವನ್ನು ನೀವು ಪವರ್ ಬ್ರೋಕರ್ ಎಂಬ ಪದಕ್ಕೆ ಸಮಾನಾಂತರವಾಗಿ ಬಳಸಿದಂತೆ ಕಾಣ್ತಿದೆ. ನಾನೀಗ ಮೊದಲಿನಂತಿಲ್ಲ. ದ್ವೇಷ, ಹಿಂಸೆ, ರೋಷ, ಅಸೂಯೆಗಳನ್ನು ಎದೆಯಾಳದಿಂದ ಕಿತ್ತೆಸೆಯಲು ಪ್ರಯತ್ನಿಸುತ್ತಿದ್ದೇನೆ. ಪ್ರಕೃತಿ ನನಗೆ ತುಂಬಾ ಪಾಠ ಕಲಿಸುತ್ತಿದೆ. ಕಣ್ಮುಚ್ಚಿ ತೆರೆಯುವುದರಲ್ಲಿ ನನ್ನ ಆತ್ಮೀಯ ಮಾಧವನ ಪಿಳ್ಳೈ ಮತ್ತು ಅವರ ಮಗಳು ಅರುಂಧತಿ ಪಿಳ್ಳೈರನ್ನು ಕಳೆದುಕೊಂಡಿದ್ದೇನೆ. ಇರಲಿ, ಸಾಮಾನ್ಯ ಜನರಿಗೆ ಕಷ್ಟಕಾಲದಲ್ಲಿ ನೆರವು ನೀಡುವುದು ಆದ್ಯ ಕರ್ತವ್ಯ ಎಂಬ ಪ್ರಜ್ಞೆ ನಮ್ಮ ಜನಪ್ರತಿನಿಧಿಗಳಲ್ಲಿ ಜಾಗೃತಗೊಳ್ಳಬೇಕು. ಈ ವಾರಪೂರ್ತಿಯೂ ನಾನು ನೆರೆಪೀಡಿತರಿಗೆ ನೆರವಾಗಲು ಅಂತಃಕರಣಪೂರ್ವಕವಾಗಿ ನಿರ್ಧರಿಸಿದ್ದೇನೆ. ನೀವು ದಿಲ್ಲಿಯಿಂದ ವಾಪಸ್ಸು ಬಂದ ಕೂಡಲೇ ನಮ್ಮನ್ನು ಸೇರಿಕೊಳ್ಳಬಹುದು' ಎಂದು ಕೆ.ಎಮ್. ನಯ್ಯಾರ್ ತಣ್ಣಗೆ ಮಾತನಾಡಿದ್ದರು.

'ಛೇ ಛೇ, ನಿಮ್ಮನ್ನು ಪವರ್ ಬ್ರೋಕರ್ ಎಂಬ ಅರ್ಥದಲ್ಲಿ ಖಂಡಿತಾ ನಾನು ಮಾತನಾಡಲಿಲ್ಲ ಅಣ್ಣಾ. ಹಾಗೆ ನೋಡಿದ್ರೆ ನೀವು ಪವರ್ ಸೆಂಟರೇ ಸರಿ. ಇನ್ನೊಂದು ಪ್ರಮುಖ ವಿಚಾರವನ್ನು ನಿಮ್ಮಲ್ಲಿ ಹೇಳಬೇಕಿತ್ತು. ನಮ್ಮ ರಾಜ್ಯದ ಎಲ್ಲಾ ಎಂಪಿಗಳೊಂದಿಗೆ ಪ್ರಧಾನ ಮಂತ್ರಿ, ಗೃಹ ಮಂತ್ರಿ ಮತ್ತು ಹಣಕಾಸು ಮಂತ್ರಿಗಳನ್ನು ನಾಳೆ ಭೇಟಿಯಾಗಲು ಸಮಯ ಭೇಟಿಯಾಗಿದೆ. ಫ್ಲಡ್ ಫಂಡ್ಸನ್ನು ಕಡ್ಡಾಯವಾಗಿ ಲೋಕೋಪಯೋಗಿ ಇಲಾಖೆಯ ಮೂಲಕವೇ ಖರ್ಚು ಮಾಡಬೇಕೆಂದು ಸೆಂಟ್ರಲ್ ಗೌರ್ಮೆಂಟ್ ಆರ್ಡರ್ ಮಾಡಲಿದೆಯಂತೆ. ಇಲ್ಲಿನ ಎಲ್ಲಾ ಎಂಪಿಗಳು ಮತ್ತು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಅದನ್ನೇ ಒತ್ತಾಯಿಸಿದ್ದಾರೆ. ಇನ್ನು ಪ್ರವಾಹದಿಂದ ಆಗಿರುವ ನಷ್ಟದ ಅಂದಾಜು ಮಾಡಿ, ನಷ್ಟವನ್ನು ಸರಿದೂಗಿಸಲು ಎಷ್ಟು ಅನುದಾನ ಬೇಕೆಂಬ ಪ್ರಸ್ತಾವನೆಯನ್ನು ಸಲ್ಲಿಸಲು ಮತ್ತು ಅಂಥ ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸುವ ಅಧಿಕಾರವನ್ನು ಕೂಡಾ ಲೋಕೋಪಯೋಗಿ ಇಲಾಖೆಗೇ ವಹಿಸಿ ಆದೇಶವನ್ನು ಮಾಡಲು ಕೇಂದ್ರ ಸರ್ಕಾರ ಈಗಾಗಲೇ ತೀರ್ಮಾನಿಸಿದೆಯಂತೆ. ನೀವು ತುಂಬಾ ಅನುಭವವಿರುವ ಕಂಟ್ರಾಕ್ಟುದಾರರು. ಅದೆಲ್ಲದರ ಅರ್ಧದಷ್ಟು ಕಂಟ್ರಾಕ್ಟನ್ನು ನೀವೇ ವಹಿಸಿಕೊಳ್ಳಿ. ನಿಮ್ಮ ಮೇಲೆ ನನಗೆ ಪೂರ್ತಿ ನಂಬಿಕೆಯಿದೆ. ದೆಹಲಿಯಿಂದ ಬಂದು ಏರ್‌ಪೋರ್ಟ್‌ನಲ್ಲಿ ಇಳಿದು ಸೀದಾ ನಿಮ್ಮ ಮನೆಗೆ, ನಿಮ್ಮ ಜೊತೆಯಲ್ಲಿ ಊಟ ಮಾಡಿಕೊಂಡು ಹೋಗುತ್ತೇನೆ. ಗುಡ್ ನೈಟ್ ನಯ್ಯಾರ್ ಅಣ್ಣಾ, ಫೋನ್ ಇಡುತ್ತೇನೆ' ಎಂದು ಸತೀಶನ್ ಹರಿಹರನ್ ಒಂದೇ ಸಮನೆ ಮಾತನಾಡಿದ್ದರು. 'ಆಗಲಿ, ಗುಡ್ ನೈಟ್' ಎಂದು ನಗುತ್ತಾ ಟೀಪಾಯಿಯ ಮೇಲೆ ಫೋನ್ ಇಟ್ಟು ನಗುತ್ತಾ, 'ಕೇಳಿಸಿಕೊಂಡಿರಾ, ಕೇಳಿಸಿಕೊಳ್ಳಲಿ ಎಂದೇ ಸ್ಪೀಕರ್ ಆನ್ ಮಾಡಿದ್ದು' ಎಂದು ನಗು ತೇಲಿಸಿದ್ದರು ಕೆ.ಎಮ್. ನಯ್ಯಾರ್. **(ಸಶೇಷ)**